# ಕುರುಡ ಮತ್ತು ಲಾಟೀನು

ಇತ್ತೀಚೆಗೆ ಧರ್ಮಗಳ ನಡುವೆ ತಾಕಲಾಟ ಹೆಚ್ಚಾಗುತ್ತಿದೆ. ಎಲ್ಲರೂ ತಾವು ನಂಬಿರುವುದೇ ಅಂತಿಮ ಸತ್ಯ ಎಂದು ವಾದಿಸುತ್ತಾರೆ. ಯೂರೋಪಿನ ಪುನರುತ್ಥಾನಕ್ಕೆ ಧಾರ್ಮಿಕ ಜಗಳಗಳೇ ಅಡ್ಡಿಯಾಯಿತು. ಮೊದಲಿಗೆ ಕ್ರೈಸ್ತ ಧರ್ಮ ಇಬ್ಭಾಗವಾಯಿತು. ಪ್ರೊಟೆಸ್ಟೆಂಟ್ ಮತ್ತು ಕ್ಯಾಥೋಲಿಕರ ನಡುವೆ ಕದನ ಶುರುವಾಯಿತು. ನಂತರ ಪ್ರೊಟೆಸ್ಟೆಂಟರ ನಡುವೆಯೆ ಪಂಗಡಗಳು ಹುಟ್ಟಿಕೊಂಡವು. ಕೊನೆಯಿಲ್ಲದಂತೆ ಒಡೆದಾಡಿಕೊಂಡವು. ದೇವರ ರಾಜ್ಯ ಸ್ಥಾಪನೆಗಾಗಿ ಹುಟ್ಟಿಕೊಂಡ ಇಸ್ಲಾಂ ಕೂಡ ಕವಲುಗಳಾಯಿತು. ತಮ್ಮ ತಮ್ಮ ಧರ್ಮಗಳ ಹೆಚ್ಚುಗಾರಿಕೆಗೆ ಕೊಟ್ಟಣವ ಕುಟ್ಟಿದರು. ಗ್ರಂಥಗಳನ್ನು ಬರೆದರು. ಶಾಂತಿ ಎಂಬುದು ಸರ್ವತ್ರ ನೆಲೆಗೊಂಡಿತೆ? ಇಲ್ಲ, ಎಂಬುದೇ ಉತ್ತರ. ಒಮ್ಮೊಮ್ಮೆ ಈ ವಾದಗಳು ಎಷ್ಟು ಬಾಲಿಶವಾಗಿರುತ್ತವೆಂದರೆ, ವಿವಾದಿತ ಧರ್ಮ ಪ್ರಚಾರಕ ಝಾಕೀರ್ ನಾಯಕ್ ಕ್ರೈಸ್ತ ಸನ್ಯಾಸಿನಿಯೊಬ್ಬರಿಗೆ ಹೀಗೆ ಪ್ರಶ್ನೆ ಹಾಕುತ್ತಾನೆ. ಜೀಸಸ್, ನಾನು ದೇವರು ಎಂದು ಎಲ್ಲಿ ಹೇಳಿದ್ದಾನೆ, ತೋರಿಸಿ. ಹೇಳಿದ್ದರೆ ನಾನು ನಿಮ್ಮ ಧರ್ಮವನ್ನು ಒಪ್ಪಿಕೊಳ್ಳುತ್ತೇನೆ. ಇಲ್ಲದಿದ್ದರೆ ನೀವು ಇಸ್ಲಾಂ ಅನ್ನು ಒಪ್ಪಿಕೊಳ್ಳಿ. ನಾನು ದೇವರು ಎಂದು ಧರ್ಮ ಗ್ರಂಥದಲ್ಲಿ ಉಲ್ಲೇಖವಿದ್ದ ಮಾತ್ರಕ್ಕೆ ಆತ ಹೇಳುವುದೆಲ್ಲವೂ ಸತ್ಯ ಎಂದು ಒಪ್ಪಿಕೊಳ್ಳುವುದಾದರೆ ಮನುಷ್ಯನಿಗೆ ಮೆದುಳಿನ ಅಗತ್ಯವಾದರೂ ಯಾತಕ್ಕೆ? ಬುದ್ಧಿಶಕ್ತಿಯ ಕಾರಣದಿಂದಲೇ, ಪ್ರಶ್ನಿಸುವ ಕಾರಣದಿಂದಲೇ ಬದುಕು ಬದಲಾವಣೆಯನ್ನು ಕಾಣುತ್ತಲೇ ಇದೆ. ಲೋಕಾಚಾರ ನೂರು ವರ್ಷಗಳ ಹಿಂದೆ ಹೇಗಿತ್ತೋ ಈಗ ಹಾಗಿಲ್ಲ. ನಿರಂತರ ಬದಲಾಣೆ ಹೊಂದುವುದೇ ಪ್ರಕೃತಿಯ ಧರ್ಮ. ಹಾಗಾಗಿ ಮನುಷ್ಯನಿಗೆ ಧರ್ಮಗಳಿಂದ ಒಳಿತಾಗಿರುವುದು ಕಡಿಮೆ ಎಂದೇ ಹೇಳಬೇಕು. ಹೆಚ್ಚೆಂದರೆ ಅದು ಶ್ರದ್ಧೆ ಮತ್ತು ಆಚರಣೆಗಳ ಗಡಿರೇಖೆಗಳನ್ನು ಹಾಕಿಕೊಟ್ಟಿರಬಹುದು.

ಒಂದು ಜೆನ್ ಕಥೆ ಹೀಗಿದೆ: ಪ್ರಾಚೀನ ಕಾಲ ಜಪಾನ್ ದೇಶದಲ್ಲಿ ಬಿದಿರು ಮತ್ತು ಕಾಗದದಿಂದ ಮಾಡಿದ ಲಾಟೀನುಗಳನ್ನು ಉಪಯೋಗಿಸುತ್ತಿದ್ದರು. ಒಳಗೆ ಉರಿಯುವ ದೀಪವಿದ್ದಿತು. ಕುರುಡನೊಬ್ಬ ಒಂದು ರಾತ್ರಿ ತನ್ನ ಸ್ನೇಹಿತನನ್ನು ನೋಡಲು ಹೊರಡಲನುವಾದಾಗ ಅವನಿಗೆ ಒಂದು ಲಾಟೀನು ತೆಗೆದುಕೊಂಡು ಹೋಗುವಂತೆ ಜೊತೆಯಲ್ಲಿದ್ದ ಸ್ನೇಹಿತ ಹೇಳಿದ.

'ನನಗೆ ಲಾಟೀನಿನ ಅಗತ್ಯವಿಲ್ಲ; ಬೆಳಕು ಮತ್ತು ಕತ್ತಲೆ ಎರಡೂ ನನಗೆ ಒಂದೆ' ಎಂದ ಕುರುಡ.

ನಿನ್ನ ದಾರಿಯನ್ನು ಕ್ರಮಿಸಲು ಲಾಟೀನಿನ ಅವಶ್ಯಕತೆ ಇಲ್ಲ ಎಂದು ನನಗೆ ಗೊತ್ತು. ಅದಿಲ್ಲದಿದ್ದರೆ ಯಾರಾದರೂ ಎದುರಿನಿಂದ ಬಂದು ನಿನ್ನ ಮೇಲೆ ಬೀಳಬಹುದು. ಅದಕ್ಕಾಗಿ ನೀನು ಲಾಟೀನು ಹಿಡಿದುಕೊಂಡು ಹೋಗುವುದು ಒಳಿತು ಎಂದ ಗೆಳೆಯ.

ಕುರುಡ ಲಾಟೀನು ಹಿಡಿದು ಹೊರಟ, ಅನತಿ ದೂರದಲ್ಲಿಯೇ ಅಪರಿಚಿತನೊಬ್ಬ ಇವನ ಮೇಲೆ ಬಂದು ಎಡವಿದ. ನೋಡಿಕೊಂಡು ಹೋಗಬಾರದೆ, ಲಾಟೀನು ಕಾಣಿಸುವುದಿಲ್ಲವೆ ನಿನಗೆ ಎಂದು ಅಪರಿಚಿತನಿಗೆ ಗದರಿದ.

'ನಿನ್ನ ಲಾಟೀನಿನ ದೀಪ ಆರಿಹೋಗಿದೆ ಸೋದರ!' ಅಪರಿಚಿತನೆಂದ.

ಈ ಕಥೆ ಮಹತ್ತರವಾದದ್ದನ್ನು ಹೇಳುತ್ತಿದೆ. ಆ ಲಾಟೀನು ಧರ್ಮದ ಸಂಕೇತ. ಪ್ರತಿಯೊಬ್ಬರಿಗೂ ಅದರ ಅಗತ್ಯವಿದೆ. ನಾವೆಲ್ಲರೂ ಅದನ್ನು ಹಿಡಿದಿದ್ದೇವೆ. ಆದರೆ ಅದರೊಳಗಿನ ದೀಪ ಉರಿಯುತ್ತಿರುವಂತೆ ಎಚ್ಚರ ವಹಿಸಲಾರದ ಕುರುಡರಾಗಿದ್ದೇವೆ. ಅದನ್ನೊಂದು ಲಾಂಛನವಾಗಷ್ಟೇ ಬಳಸುತ್ತಿದ್ದೇವೆ. ಪ್ರತಿಯೊಬ್ಬರಿಗೂ ಅಲ್ಲಿ ಬೆಳಗುವ ಜ್ಯೋತಿಯ ಅರಿವಿದ್ದರೆ ಲೋಕದಲ್ಲಿ ಜನಾಂಗಭೇದ, ಜಾತಿಭೇದ, ಭ್ರಷ್ಟಾಚಾರ, ಕ್ರೌರ್ಯ, ಅಕ್ರಮ, ಅನೀತಿ ಎಲ್ಲವೂ ಮಾಯವಾಗುತ್ತವೆ. ಈ ದೃಷ್ಟಿಯಲ್ಲಿಯೇ ಬುದ್ಧ 'ನಿನಗೆ ನೀನೆ ಬೆಳಕು' ಎಂದು ಹೇಳಿರುವುದು. ಎಚ್ಚರ ಎಂಬ ಎಣ್ಣೆ, ಅರಿವು ಎಂಬ ಬತ್ತಿ ನಮ್ಮೊಳಗೇ ಇವೆ. ನಾವು ಹಿಡಿದಿರುವ ಲಾಟೀನಿನ ಬೆಳಕಿಗೆ ನಾವೇ ಜವಾಬ್ದಾರರು. ಹೊರಗಿನ ಶಕ್ತಿ ಎಂಬುದಿಲ್ಲ. ಬುದ್ಧನ ಉಪದೇಶಗಳು ಬಹುತೇಕ ತನಗೆ ತಾನೇ ಹೇಳಿಕೊಂಡ ಮಾತುಗಳು. ಪ್ರಕೃತಿಯಲ್ಲಿ ಕಾಣುವ ಸತ್ಯಗಳು, ಇಹಕ್ಕೆ ಸಂಬಂಧಿಸಿದವು, ಪರದ ಬಗ್ಗೆ ಅಲ್ಲ. ಬಂದು ನೋಡು, ಪರೀಕ್ಷಿಸು (ಏಹಿಪಸ್ಸಿಕೊ, ಓಪನಹಿಕೊ) ನಿನ್ನ ಧರ್ಮವೇನೆಂಬುದ ತಿಳಿ ಎಂದು ಹೇಳುತ್ತಾನೆ. ಬೌದ್ಧ ತತ್ವ ಎಂದರೆ ದೀಪ ಆರದಂತೆ ನೋಡಿಕೊಳ್ಳುವುದು ಅಂದರೆ ಸದಾ ಎಚ್ಚರವಾಗಿರುವುದು.

ಬುದ್ಧನಿಗೆ ಜ್ಞಾನೋದಯವಾಯಿತು ಎಂದರೆ ಸೃಷ್ಟಿಯ ಆದಿಕಾರಣಗಳನ್ನು ತಿಳಿದುಕೊಂಡ, ಕರ್ತಾರನ ಪರಿಚಯ ಮಾಡಿಕೊಂಡ ಎಂತಲ್ಲ. ಪ್ರಕೃತಿಯಲ್ಲಿ ಇರುವ ಸತ್ಯಗಳನ್ನು ಇರುವ ಹಾಗೇ ತಿಳಿಯುವ ಅರಿವು ಪಡೆದುಕೊಂಡ ಎಂದು. ತನ್ನ ಇಂದ್ರಿಯಗಳಿಗೆ ಗೋಚರವಾದ ಸತ್ಯಗಳನ್ನು ಇರುವ ಹಾಗೆ ಹೇಳಿದ, ಅರಹಂತನಾದ. ಅಷ್ಟಕ್ಕೆ ನಿಲ್ಲಿಸಲಿಲ್ಲ, ಇರುವುದನ್ನು ಇರುವ ಹಾಗೆ ನೋಡುವುದನ್ನು ಕಲಿತರೆ ನೀವು ಬುದ್ಧರಾಗಬಹುದು ಎಂದ. ಇದೇ ಬೌದ್ಧ ವೈಶಿಷ್ಟ್ಯ. ಮಿಕ್ಕ ಧರ್ಮಗಳು ಮನುಷ್ಯನನ್ನು ಹೊರಗಿಟ್ಟು ದೇವರನ್ನು ಕಲ್ಪಿಸಿವೆ. ಆದರೆ ಹುಟ್ಟು, ಬದಲಾವಣೆ, ಕ್ಷಯಿಸುವುದು ಪ್ರಕೃತಿಯ ಧರ್ಮ ಎಂದು ಹೇಳುವ ಬುದ್ಧ ತಾನೂ ಸಹ ಮನುಷ್ಯನಾಗಿದ್ದು ಬುದ್ಧತ್ವಕ್ಕೆ ಬೆಳೆದವನು ಎಂದು ಹೇಳಿದ. ಜ್ಞಾನ ಪಿಪಾಸುಗಳ ಕಣ್ಮಣಿಯಾದ.

■ ಮೂಚಿ

## ಮಾತೇ ಮುತ್ತು

★ ದೇವರ ಮನೆಯಲ್ಲಿ ದ್ವೇಷಕ್ಕೆ ಸ್ಥಳವಿಲ್ಲ.
ಡೆಸ್ಮಂಡ್ ಟುಟು

★ ನಮ್ಮ ಶಕ್ತಿಗಿಂತ ಹೆಚ್ಚಿನದನ್ನು ನಮ್ಮ ತಾಳ್ಮೆಯಿಂದ ಸಾಧಿಸಬಹುದು.
ಎಡ್ಮಂಡ್ ಬರ್ಕ್

★ ಸ್ವಾರ್ಥಿ ಮನುಷ್ಯರು ಇನ್ನೊಬ್ಬರನ್ನು ಪ್ರೀತಿಸುವುದಿಲ್ಲ; ಅವರು ತಮ್ಮನ್ನೂ ಪ್ರೀತಿಸಲು ಆಗುವುದಿಲ್ಲ.
ಎರಿಕ್ ಫ್ರಾಮ್

★ ನಿಮ್ಮ ಬಾಯಲ್ಲಿ ಅನ್ನ ಇರುವ ತನಕ ನಿಮ್ಮೆಲ್ಲ ಪ್ರಶ್ನೆಗಳು ಪರಿಹಾರ ಆಗಿದೆಯೆಂದೇ ಅರ್ಥ.
ಫ್ರಾಂಝ್ ಕಾಫ್ಕಾ

★ ಸಿದ್ಧತೆಯು ಅವಕಾಶವನ್ನು ಸಂಧಿಸುವ ತಾಣವೇ ಅದೃಷ್ಟ.
–ಓಪ್ರಾ ವಿನ್‌ಫ್ರೇ

★ ನಾನು ಜೀವನದಲ್ಲಿ ಸೋಲಿನ ಮೇಲೆ ಸೋಲುಂಡಿದ್ದೇನೆ; ಹಾಗೆಂದೇ ಕೊನೆಗೆ ಯಶಸ್ವಿಯಾದೆ.
– ಮೈಕೆಲ್ ಜೋರ್ಡಾನ್

★ ನಾನೇನು ಮಾಡಬಲ್ಲೆ ಎನ್ನುವುದು ನನಗೆ ಗೊತ್ತಿದೆ. ಹಾಗಾಗಿ ಬೇರೆಯವರ ಕಾಮೆಂಟುಗಳ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ.
–ಉಸೇನ್ ಬೋಲ್ಟ್

★ ಕೆಟ್ಟವರ ಜತೆಗಿರುವುದಕ್ಕಿಂತ ಒಬ್ಬಂಟಿಯಾಗಿ ಇರುವುದು ಬಹಳ ಒಳ್ಳೆಯದು.
–ಜಾರ್ಜ್ ವಾಷಿಂಗ್ಟನ್

★ ಆದರ್ಶಗಳು ಪ್ರತಿದಿನ ಪಠಣ ಮಾಡಬೇಕಾದ ಗೊಡ್ಡು ಮಂತ್ರಗಳಲ್ಲ. ಅವು ನಮ್ಮ ಜೀವನದ ಉಸಿರು.
ಕುವೆಂಪು

★ ಪ್ರತಿಫಲದ ಅಪೇಕ್ಷೆಯಿಲ್ಲದೆ ಕೇವಲ ಆತ್ಮತೃಪ್ತಿಗಾಗಿ ಕೆಲಸ ಮಾಡಿದಾಗ, ಮೋಸ ಹೋದಾಗಲೂ ದುಃಖವಾಗುವುದಿಲ್ಲ.
ಡಿ ವಿ ಗುಂಡಪ್ಪ

★ ಕಾಲ ಹಿಂದಕ್ಕೆ ಚಲಿಸುವುದಿಲ್ಲ. ಅದರ ಜೊತೆಗೇ ಹೆಜ್ಜೆ ಹಾಕದಿದ್ದರೆ ನಾವು ನಿಂತಲ್ಲೇ ನಿಂತಿರಬೇಕಾಗುತ್ತದೆ.
ಕೆ ಶಿವರಾಮ ಕಾರಂತ

★ ನಡೆದಷ್ಟು ದಾರಿ ಇದೆ, ಪಡೆದಷ್ಟು ಭಾಗ್ಯವಿದೆ ಎಂಬುದೇ ಜಗತ್ತು ನಮಗೆ ನೀಡುವ ಸಂದೇಶವಾಗಿದೆ.
ವಿ.ಕೃ.ಗೋಕಾಕ್

★ ಪ್ರತಿಯೊಂದು ಸಮಸ್ಯೆಗೆ ಉತ್ತರ ಇರುತ್ತದೆ. ಈ ನಂಬಿಕೆ ಇದ್ದಾಗ ಪ್ರತಿಯೊಂದು ಕಷ್ಟವೂ ಪರಿಹಾರವಾಗುತ್ತದೆ.
ಆಲೂರು ವೆಂಕಟರಾಯರು